ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಾನು ಒಂದು ಮೀಸಲಾತಿಯ ಬಗ್ಗೆ ಕೊಟ್ಟಿದ್ದೇನೆ. ನಾನು ತಮ್ಮ ಛೇಂಬರಿನಲ್ಲಿ Municipal reservation ಬಗ್ಗೆ ಕೊಟ್ಟಿದ್ದೇನೆ.

ಶ್ರೀ ಎನ್. ಸಂಪಂಗಿ : ಮಾನ್ಯ ಅಧ್ಯಕ್ಷರೆ, ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

ಅಧ್ಯಕ್ಷರು : ತಾವು ಬೇರೆ ರೂಪದಲ್ಲಿ ತನ್ನಿ. ಮಾನ್ಯ ವಿರೋಧಪಕ್ಷದ ನಾಯಕರೆ, ತಾವು ಮಾತನಾಡಿ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ನನ್ನದೊಂದು ವಿಷಯ ಇದೆ. ನಾನು ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

ಶ್ರೀ ಎನ್. ಸಂಪಂಗಿ : ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೀರಾ ಅಥವಾ ಇಲ್ಲವೇ?

ಅಧ್ಯಕ್ಷರು : ಇದು ನಿನ್ನೆ ಮೊನ್ನೆಯ ಆದೇಶವಾಗಿದೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸಿದ್ದರಾಮಯ್ಯನವರೆ, ಇದು ವಾರ್ಡ್ ವಿಂಗಡಣೆಯ ಬಗ್ಗೆ.

ಶ್ರೀ ಸಿದ್ದರಾಮಯ್ಯ : ಈ ಬಗ್ಗೆ ಮಾನ್ಯ ಜಯಚಂದ್ರರವರು ಪ್ರಸ್ತಾಪವನ್ನು ಮಾಡುತ್ತಾರೆ.

ಅಧ್ಯಕ್ಷರು : ಆಯಿತು.

6. ವಿಷಯ : ವಾರ್ಡ್ ವಿಂಗಡಣೆಯ ಬಗ್ಗೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ) : ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ನಗರಪಾಲಿಕೆ, ಮಹಾನಗರಪಾಲಿಕೆ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಚುನಾವಣೆಯನ್ನು ಮಾಡಬೇಕೆಂದು ಹೈಕೋರ್ಟಿನ ನಿರ್ದೇಶನದ ಮೇರೆಗೆ ಈಗ ಒಂದು ಪಟ್ಟಿಯನ್ನು ಪ್ರಕಟಣೆಯನ್ನು ಮಾಡಿದ್ದಾರೆ. Resevation ಬಗ್ಗೆ ಒಂದು ಪಟ್ಟಿಯನ್ನು ರಾಜ್ಯಾದ್ಯಂತ ಪ್ರಕಟಣೆ ಮಾಡಿದ್ದಾರೆ. ಅದು ಅತ್ಯಂತ ಅವೈಜ್ಞಾನಿಕ. ಇದಕ್ಕಿಂತ ದೊಡ್ಡ

ಶಬ್ದವನ್ನು ಉಪಯೋಗಿಸುವುದಕ್ಕೆ ಬರುವುದಿಲ್ಲ. ನಾವು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿದ್ದೇವೆ. ಇವರ ಸರ್ಕಾರದ ಆದೇಶದ ಒಕ್ಕಣೆ ಏನು ಹೇಳುತ್ತದೆ ಎಂದರೆ ಕ್ರೇಂದ್ರ ಸರ್ಕಾರವು ಕರ್ನಾಟಕ ರಾಜ್ಯದಲ್ಲಿ 2011ರ ಜನಗಣತಿಯ ಕಾರ್ಯ ಪೂರ್ಣಗೊಳಿಸಿದ್ದು ಅಧಿಕೃತವಾದ ರಾಜ್ಯದ ಜನಸಂಖ್ಯೆಯ ಅಂಕಿಅಂಶಗಳನ್ನು ಇದುವರೆಗೂ ಪ್ರಕಟಿಸಿರುವುದಿಲ್ಲ. ಇದರ ಬಗ್ಗೆ ಅನಧಿಕೃತವಾಗಿ ಎಲ್ಲರಿಗೂ ಗೊತ್ತಿದೆ. ಕ್ರಮ ಸಂಖ್ಯೆ: 3ರಲ್ಲಿ ಓದಲಾದ ಪತ್ರದಲ್ಲಿ ಉಪನಿರ್ದೇಶಕರು, ಜನಗಣತಿ ನಿರ್ದೇಶನಾಲಯ, ಬೆಂಗಳೂರು ಇವರು ಅಂಕಿಅಂಶಗಳನ್ನು ಮಾರ್ಚಿ 2013ರ ನಂತರ ಪ್ರಕಟಿಸುವ ಸಾಧ್ಯತೆ ಇರುತ್ತದೆ. ರಾಜ್ಯದಲ್ಲಿ ಹೆಚ್ಚಿನ ನಗರಸಭೆ ಸ್ಥಳೀಯ ಸಂಸ್ಥೆಗಳು ಕೌನ್ಸಿಲ್ ಅವಧಿಯು ಫೆಬ್ರವರಿ–ಮಾರ್ಚಿಗೆ ಮುಗಿಯುವುದರಿಂದ ನಿಗದಿತ ಸಮಯದಲ್ಲಿ ನಿಯಮಾನುಸಾರ ತೆಗೆದುಕೊಳ್ಳುವುದು ಸೂಕ್ತವೆಂದು ಭಾವಿಸುತ್ತೇನೆ. 2001ರ ಜನಗಣತಿ ಆಗಿದೆ. ಈಗ 2011 ಆಗಿ 2013ರಲ್ಲಿದ್ದೇವೆ. 2001ಕ್ಕೆ ಹೋಗಿ ಇವರು ಜನಗಣತಿಯನ್ನು ಆಧರಿಸಿ ಚುನಾವಣೆಯನ್ನು ಮಾಡುತ್ತೇವೆಂದು ಹೇಳುವುದು ಅವೈಜ್ಞಾನಿಕ. ಇದು ಪ್ರಜಾಪ್ರಭುತ್ವ ಅಲ್ಲ. ಸರ್ಕಾರದ ಆದೇಶಗಳು ಏನಾದರೂ ಇರಲಿ. ಇದರಲ್ಲಿ ಒಂದು ತಮಾಷೆ ಏನೆಂದರೆ, ನಾವು ಮೊನ್ನೆ ಹೋದಾಗ ಅಲ್ಲಿ ಎಲ್ಲರೂ ನಮ್ಮನ್ನು attack ಮಾಡಿದರು. ನೀವೆಲ್ಲರೂ ಸೇರಿಕೊಂಡು ಏನೋ ಮಾಡಿಬಿಟ್ಟಿದ್ದೀರೆಂದು ಹೇಳಿದರು. ನಾನು ಅಂಕಿಅಂಶವನ್ನು ನೋಡಿದ್ದೇನೆ. 100ಕ್ಕೆ 100 Scheduled Caste ಜನ ಇರುವಂತಹ contituencyಗಳಲ್ಲಿ ಅದನ್ನು General/Lady ಎಂದು ಮಾಡಿದ್ದಾರೆ. 100ಕ್ಕೆ100 ಎಸ್.ಟಿ. ಇರುವಂತಹ ಕಡೆಗೆ ಎಸ್. ಸಿ. ಮಾಡಿದ್ದಾರೆ. ಓಟು ಹಾಕತಕ್ಕಂತಹ ಅಧಿಕಾರ ಇಲ್ಲದೇ ಇರುವಂತಹ ರೀತಿಯಲ್ಲಿ ಚುನಾವಣೆಗೆ ನಿಲ್ಲುವುದಕ್ಕೆ ಗತಿಯೇ ಇಲ್ಲದೇ ಇರುವ ರೀತಿಯಲ್ಲಿ ಅವೈಜ್ಞಾನಿಕವಾಗಿದೆ. ಎಲ್ಲದಕ್ಕಿಂತಲೂ ಮುಖ್ಯವಾಗಿ ಏನಾಗಿದೆ ಎಂದರೆ, ಈಗ voter list enrolment ನಡೆಯುತ್ತಿದೆ. Enrolment ನಡೆಯುವ ಪ್ರಕಾರ ಇವತ್ತು ಚುನಾವಣಾ ಆಯೋಗದವರು ಹೇಳುವ ಪ್ರಕಾರ 7.7.2012ರಲ್ಲಿ ಪ್ರಕಟಿಸಿದಂತಹ ಕರಡು ಮತದಾರರ ಪಟ್ಟಿಯನ್ನು ಆಧರಿಸಿಯೇ ಚುನಾವಣೆಯನ್ನು ಮಾಡಬೇಕೆಂದು

ಹೇಳುತ್ತಾರೆ. ಇದು ಯಾವುದು? ಈಗ ದಿನಾಂಕ: 1.1.2013ಕ್ಕೆ ಅಂದರೆ, ಇನ್ನು 20 ದಿವಸಕ್ಕೆ ತುಮಕೂರು ಜಿಲ್ಲೆಯೊಂದರಲ್ಲಿ 88 ಸಾವಿರ ಜನ ಮತದಾರರು ಅರ್ಹರಾಗುತ್ತಾರೆ. ಇವರು ದಿನಾಂಕ: 7.7.2012 ಎಂದು ನಿರ್ದೇಶನ ಕೊಟ್ಟಿದ್ದಾರೆ. ಇದನ್ನು ಆಧರಿಸಿಯೇ ಚುನಾವಣೆ ಮಾಡಬೇಕೆಂದು ಹೇಳುತ್ತಾರೆ. ಇವರು 88 ಸಾವಿರ ಜನರಿಗೆ ಚುನಾವಣೆಗೆ ಓಟು ಮಾಡುವ ಹಕ್ಕು ಇಲ್ಲವೆನ್ನುವಂತಹ ರೀತಿಯಲ್ಲಿ ಸೂಚನೆಯನ್ನು ಕೊಟ್ಟರೆ ಇದು ತಪ್ಪಾಗುತ್ತದೆ. ನೀವು ಕೊಟ್ಟಿರುವಂತಹ ಗೈಡ್‌ಲೈನ್ಸ್ ಅಪೈಜ್ಞಾನಿಕವಾಗಿದೆ, ಇದು ಜನವಿರೋಧಿಯಾಗಿದೆ. ಇದಕ್ಕೆ ಯಾವುದೇ ರೀತಿಯಲ್ಲಿ ಸಾಮಾಜಿಕ ನ್ಯಾಯ ಕೊಡುವುದಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ದಯಮಾಡಿ ಮಾಡಬೇಕು.ಇವತ್ತು revised form ನಲ್ಲಿ ಏನಿದೆ? ಈ ಬಗ್ಗೆ ನಾವು ಎಲ್ಲೋ ಒಂದು ಕಡೆಯಲ್ಲಿ ಚರ್ಚೆ ಮಾಡಲು ಬಂದಾಗ ಚುನಾವಣೆ ಮಾಡುವುದಕ್ಕೆ ಇಷ್ಟವಿಲ್ಲವೇನೋ ಎನ್ನುವ ರೀತಿಯಲ್ಲಿ ಆಗಿದೆ. ಬಹುಶ: ಸರ್ಕಾರಕ್ಕೆ ಇದು ಗೊತ್ತಿದೆ, ಈಬಗ್ಗೆ ಮಂತ್ರಿಗಳಿಗೆ ಹಾಗೂ ಮಾನ್ಯ ಮುಖ್ಯಮಂತ್ರಿಗಳಿಗೂ ಸಹ ಗೊತ್ತಿದೆ. ಆದರೆ ಕೋರ್ಟು ನಿರ್ದೇಶನ ಕೊಟ್ಟಿತ್ತು ಎನ್ನುವ ಕಾರಣಕೋಸ್ಕರ ಈ ಬಗ್ಗೆ ಸರ್ಕಾರವೇ ನೇರವಾಗಿ ಕೋರ್ಟಿಗೆ ಹೋಗಿ ಈ ರೀತಿಯಾಗಿ ತಪ್ಪಾಗಿದೆ ಈ ತಪ್ಪನ್ನು ಸರಿಪಡಿಸಬೇಕಾದಾಗ ದಿನಾಂಕ: 1.1.2013 ಎಂದರೆ ಇನ್ನು 20 ದಿವಸದಲ್ಲಿ ಬರುವ ಮತದಾರರಿಗೆ ವಂಚನೆಯಾಗುತ್ತದೆ. ಮತದಾನ ಮಾಡುವುದು ಅವರ ಹಕ್ಕು. ಅವರ ಹಕ್ಕನ್ನು ಕಿತ್ತುಕೊಳ್ಳುವುದಕ್ಕೆ ಸಂವಿಧಾನದಲ್ಲಿ ಯಾರಿಗೂ ಅವಕಾಶವಿಲ್ಲ. ಹಾಗಾಗಿ ದಿನಾಂಕ: 1.1.2013ರನ್ನು ಆಧರಿಸಿಯೇ ಚುನಾವಣೆ ಮಾಡುವಂತಹ ನಿರ್ಧಾರವನ್ನು ಮಾಡಬೇಕು. ಈ ಬಗ್ಗೆ ಯಾವುದೇ ಕಾರಣಕ್ಕೂ ಕೂಡ ಈ ಮೀಸಲಾತಿಯಲ್ಲಿ ಆಗಿರುವಂತಹ ಗೊಂದಲ, ವ್ಯತ್ಯಾಸವನ್ನು ಸ್ಥಳೀಯವಾಗಿರುವಂತಹ Deputy Commissioner ಇರಬಹುದು ತಹಶೀಲ್ದಾರರು ಇರಬಹುದು. ಅವರಿಂದ ಮಾಹಿತಿಯನ್ನು ತರಿಸಿಕೊಂಡು ನಿಗಧಿ ಮಾಡತಕ್ಕಂತಹ ಕೆಲಸವನ್ನು ತಾವು ಮಾಡಬೇಕು. ಇಲ್ಲಿ Deputy Commissioner ರವರಿಗೆ ಈ ಬಗ್ಗೆ ಮಾಹಿತಿಯೇ ಗೊತ್ತಿರುವುದಿಲ್ಲ. ಇದರ ಬಗ್ಗೆ ಯಾರಿಗೂ ಸಹ ಗೊತ್ತಿರುವುದಿಲ್ಲ. ಏಕಾಏಕಿ ಕೋರ್ಟಿನವರು ಹೇಳಿದ ತಕ್ಷಣ ಸರ್ಕಾರದಿಂದ ಒಂದು notification ಅನ್ನು

ಮಾಡಿಬಿಟ್ಟರು. ಇದನ್ನು ಈ ರೀತಿಯಾಗಿ ಒತ್ತಡಕ್ಕೆ ತಾವು ಮಾಡಿದರೆ ಇದು ಪ್ರಜಾಪ್ರಭುತ್ವದಲ್ಲಿ ಸಾಧ್ಯ ಆಗುವುದಿಲ್ಲ. ಇದರಲ್ಲಿ ಇನ್ನೊಂದು ಬಹಳ ಮುಖ್ಯವಾದ ಅಂಶ ಇದೆ. 2011ರ ಜನಗಣತಿಯನ್ನು ಆಧರಿಸಿ ನೀವು ಮಾಡುವುದಾದರೆ ಹೆಚ್ಚುಲಾಭವಿದೆ. ಇದರಿಂದ ಕೇಂದ್ರ ಸರ್ಕಾರದಿಂದ ಹೆಚ್ಚು ಹಣವನ್ನು ಪಡೆಯುವ ಸಾಧ್ಯತೆ ಇದೆ. ಉದಾಹರಣೆಗೆ ತುಮಕೂರು, ಇವತ್ತಿನ ಜನಸಂಖ್ಯೆಯನ್ನು ಆಧರಿಸಿದರೆ ನಮ್ಮದು ಕಾರ್ಪೊರೇಷನ್ ಆಗುತ್ತದೆ. ನಗರಸಭೆ ಹೋಗಿ ಇವತ್ತು ಕಾರ್ಪೊರೇಷನ್ ಆಗುತ್ತದೆ. ಅದೇ ರೀತಿಯಾಗಿ ಕರ್ನಾಟಕದಲ್ಲಿ ಮೂರು ಕಾರ್ಪೊರೇಷನ್‌ಗಳು ಆಗುವಂತಹ ಅವಕಾಶವಿದೆ. TMC ಯಿಂದ CMC ಆಗುವಂತಹದ್ದು 23 ಇದೆ. ಅದೇ ರೀತಿಯಾಗಿ ಗ್ರಾಮ ಪಂಚಾಯಿತಿಯಿಂದ ಆಗುವಂತಹದ್ದು 42 ಇದೆ. ಇಷ್ಟೆಲ್ಲಾ ಇದ್ದು ಅವರು ಕೇಂದ್ರ ಸರ್ಕಾರದಿಂದ ಹೆಚ್ಚು ಹಣವನ್ನು ತಂದು ಇವತ್ತು ಅಧಿಕಾರವನ್ನು ಕೊಡತಕ್ಕಂತಹ ಕೆಲಸವನ್ನು ಮಾಡುವುದರ ಬಗ್ಗೆ ಚಿಂತನೆಯನ್ನು ಮಾಡಬೇಕು. Suppose, ಇವತ್ತು ತಾವು ಚುನಾವಣೆಯನ್ನು ಮಾಡಿದರೆ Election Commissioner ರವರು ಏಕಾಏಕಿ ಇವತ್ತು ಹೈಕೋರ್ಟಿಗೆ ಹೋಗಿ ಅರ್ಜಿ ಹಾಕಿದ್ದಾರೆ.

ಹೈಕೋರ್ಟ್‌ಗೆ ಹೋಗಿ ಇವತ್ತು ಅರ್ಜಿ ಹಾಕಿದ್ದಾರೆ. ಅದಕ್ಕೆ ಬೇಕಾದರೆ ನೀವು ಚುನಾವಣೆ ಮಾಡಿದರೆ ಇನ್ನು ಐದು ವರ್ಷ ಯಾವುದನ್ನೂ ಮಾಡುವುದಕ್ಕಾಗುವುದಿಲ್ಲ. ಕಾಪೋರೇಷನ್ ಮಾಡಲಿಕ್ಕಾಗು-ವುದಿಲ್ಲ. TMC ಇಂದು CMC ಮಾಡಲಿಕ್ಕಾಗುವುದಿಲ್ಲ. ಪಂಚಾಯಿತಿಯಿಂದ ಇವತ್ತು ಪಟ್ಟಣ ಪಂಚಾಯಿತಿ ಮಾಡಲಿಕ್ಕಾಗುವುದಿಲ್ಲ. ಇದು ಖಂಡಿತವಾಗಿಯೂ ಸರ್ಕಾರಕ್ಕೆ ಹಾಗೂ ಜನಪ್ರತಿನಿಧಿಗಳಿಗೆ ನಷ್ಟವಾಗುತ್ತದೆ. ಇದು ಘೋರ ಅನ್ಯಾಯವಾಗುತ್ತದೆ, ಇದು ಅವೈಜ್ಞಾನಿಕ, ಇದನ್ನು ಯಾವುದೇ ರೀತಿಯಲ್ಲಿಯೂ ಅನುಷ್ಠಾನ ಮಾಡಬಾರದು. ಇವತ್ತು ಸಭಾಧ್ಯಕ್ಷರಲ್ಲಿ ನಾನು ಪರಿ ಪರಿಯಾಗಿ ಕೇಳುತ್ತಿದ್ದೇನೆ. ಎಲ್ಲರ ಕ್ಷೇತ್ರದಲ್ಲಿ ಆಗಿರುವಂಥದ್ದು ನನಗೆ ಮೊನ್ನೆಶ್ರೀ ಫಿರೋಜ್ ಸೇಠ್‌ರವರು ಹೇಳುತ್ತಿದ್ದರು. ಬೆಳಗಾಂನಲ್ಲಿ 25 ಕ್ಷೇತ್ರ ಅವರಿಗೆ ಬರುತ್ತದೆ ಅದರಲ್ಲಿ 24 ಜನ ಮಹಿಳೆಯರು ಇದ್ದಾರೆ. ಜನ ಅವರನ್ನು ಏನೆಂದುಕೊಳ್ಳಬೇಕು? 25 ಜನ

ಮಹಿಳೆಯರು ಇದ್ದಾರೆಂದರೆ ಅವರ ಪರಿಸ್ಥಿತಿ ಏನಾಗಬೇಕು? ಈರೀತಿ ಆಗಿರುವ ತಪ್ಪನ್ನು ಸರಿಪಡಿಸಲಿಕ್ಕೋಸ್ಕರ ಇವತ್ತು ಮತ್ತೆ ತಾವು ಕೋರ್ಟ್ ಮುಂದೆ ತಾವು ಹೋಗಬೇಕು ಎನ್ನುವಂಥ ಮಾತನ್ನು ಹೇಳಿ ಇದನ್ನು ಯಾವುದೇ ಕಾರಣಕ್ಕೂ ಕೂಡ 01.01.2013ರ ಅಂಕಿಅಂಶವನ್ನು ಆಧರಿಸಿ 2011ರ ಜನ ಗಣತಿಯನ್ನು ಆಧರಿಸಿಯೇ ಚುನಾವಣೆಯನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್. ಎಸ್. ಮಹದೇವಪ್ರಸಾದ್ (ಗುಂಡ್ಲುಪೇಟೆ) : ಸನ್ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಪುರಸಭೆ ಮತ್ತು ಪಟ್ಟಣ ಪಂಚಾಯಿತಿ, ನಗರ ಸಭೆ, ಮಹಾನಗರಪಾಲಿಕೆ ಇವುಗಳಿಗೆ ಮೀಸಲಾತಿ ಆವರ್ತನೆಗಳ ಮೇಲೆ ವಾರ್ಡ್ ನಿಗದಿಪಡಿಸುವಂಥ ಒಂದು ಪ್ರಕ್ರಿಯೆ ಸರ್ಕಾರ ಏನು ಕೈಗೊಂಡಿದೆ? ಇದರಲ್ಲಿ ಸಾಕಷ್ಟು ಲೋಪದೋಷಗಳಿಂದ ಕೂಡಿರುವಂಥ ಮಾರ್ಗಸೂಚನೆ ಆಗಿದೆ. 2000ದ ಕೋರ್ಟ್ ಆದೇಶದಂತೆ ಇವರು 2001ರ ಜನಗಣತಿಯ ಆಧಾರದ ಮೇಲೆ ಮಾಡಬೇಕೆಂಬ ಒಂದು ಗೈಡ್‌ಲೈನ್ಸ್ ಹೊರಡಿಸಿದ್ದರೂ ಕೂಡ ಇದನ್ನು ಕಾರ್ಯರೂಪಕ್ಕೆ ತರುವಂಥ ಹಂತದಲ್ಲಿ ನ್ಯಾಯಾಲಯಕ್ಕೆ ತರಾತುರಿಯಲ್ಲಿ ಆ ಒಂದು reservation list ಅನ್ನು submit ಮಾಡಬೇಕೆನ್ನುವ ಕಾರಣಕ್ಕಾಗಿ ನಗರಾಭಿವೃದ್ಧಿಯ ಇಲಾಖಾಧಿಕಾರಿಗಳು ಏನು ಮಾಡಿದ್ದಾರೆ ಅವರು ಹಿಂದೆ ಯಾವ್ಯಾವ ವಾರ್ಡ್‌ಗಳಲ್ಲಿ ಕೇವಲ ಎಸ್.ಸಿ/ಎಸ್.ಟಿ.ವಾರ್ಡ್‌ಗಳನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಪುನರಾವರ್ತನೆ ಆಗದ ರೀತಿಯಲ್ಲಿ ಮಾಡಿದ್ದಾರೆ. ಆದರೆ ಉಳಿದಂಥ ಕಡೆ ಯಾವುದೇ ರೀತಿಯ ಒಂದು ಮಾನದಂಡವನ್ನು ಅವರು ಅನುಸರಿಸಿಲ್ಲ. ಇಲ್ಲೇನಾಗಿದೆ ಎಂದರೆ 2001ರ ಜನಗಣತಿ ಪ್ರಕಟವಾದ ಮೇಲೆ ಎರಡು ಚುನಾವಣೆಗಳಾಗಿವೆ, 2004ರಲ್ಲಿ ಒಂದು 2008ರಲ್ಲಿ ಒಂದು ಒಟ್ಟು ಎರಡು ಸ್ಥಳೀಯ ಸಂಸ್ಥೆಗಳ ಚುನಾವಣೆಗಳಾಗಿವೆ. ಈ ಬಗ್ಗೆ ಗೈಡ್‌ಲೈನ್ಸ್‌ನಲ್ಲಿ ಹೇಳುತ್ತಾರೆ. 2008ರ ಚುನಾವಣೆಯಲ್ಲಿ ಏನು ಮೀಸಲಾತಿ ನಿಗದಿಯಾಗಿತ್ತು ಅವು ಪುನರಾವರ್ತನೆ ಆಗಬಾರದು ಎಂದು ಹೇಳುತ್ತಾರೆ. ಆದರೆ ಇವರು population criteria ವನ್ನು ಆಧಾರವಾಗಿಟ್ಟುಕೊಂಡಿರುವಂಥದ್ದು 2004ರ ಚುನಾವಣೆ ಜನಗಣತಿ ಎಸ್.ಸಿ/ಎಸ್.ಟಿ. ಜನಸಂಖ್ಯೆ ಆಧಾರವಾಗಿಟ್ಟುಕೊಂಡು 2012ರಲ್ಲಿ ಮೀಸಲಾತಿಯನ್ನು ನಿಗದಿಪಡಿಸಿದ್ದಾರೆ. ಆದ್ದರಿಂದ

2008ರಲ್ಲಿ ಚುನಾವಣೆ ಮಾಡುವಂಥ ಸಾಧನೆದಲ್ಲಿ ಸಾಕಷ್ಟು ಮಾರ್ಪಾಡುಗಳು ವಾರ್ಡ್‌ಗಳಲ್ಲಿ ಆಗಿವೆ. ಅದನ್ನು ಗಮನಕ್ಕೆ ತೆಗೆದುಕೊಳ್ಳದೇನೆ ಇವರು ಮೀಸಲಾತಿ ನಿಗದಿಪಡಿಸಿರುವಂಥದ್ದು ಬಹಳ ಲೋಪದೋಷಗಳಿಂದ ಕೂಡಿದೆ. ಎಷ್ಟೋ ಕಡೆ ಎಸ್.ಸಿ/ಎಸ್.ಟಿ. ಜನಸಂಖ್ಯೆ 2004ರಲ್ಲಿತ್ತು. 2008ರ ಚುನಾವಣೆಯಲ್ಲಿ ಅದು ಕ್ಷೇತ್ರ ಮಾರ್ಪಾಡಾದಾಗ ಬದಲಾವಣೆಯಾಗಿವೆ. ಆದರೆ ಅದೊಂದನ್ನು ಅವರು ಗಣನೆಗೆ ತೆಗೆದುಕೊಳ್ಳದೇನೆ ಆಹಿಂದಿನ ಚುನಾವಣೆ 2004ರ ಚುನಾವಣೆ ಜನಸಂಖ್ಯೆಯ ಪಟ್ಟಿ ಏನಿತ್ತು ಅದನ್ನು ಆಧಾರವಾಗಿಟ್ಟುಕೊಂಡು ಮಾಡಿರುವುದರಿಂದ ಸಾಕಷ್ಟು ಲೋಪದೋಷಗಳಾಗಿವೆ. ರಾಜ್ಯಾದ್ಯಂತ ಎಲ್ಲಾ ಪುರಸಭೆಗಳಿಂದಲೂ 50–100 ದೂರುಗಳು ಇವತ್ತು ಜಿಲ್ಲಾಧಿಕಾರಿಗಳಿಗೆ ಸಲ್ಲಿಕೆಯಾಗಿವೆ. ಆದ್ದರಿಂದ ಈ ಒಂದು ನೋಟಿಫಿಕೇಷನ್ ಏನಾಗಿದೆ ಮತ್ತೆ ಶೇಕಡ 50 ರಷ್ಟು ಮೀಸಲಾತಿ ಮೀರದಂತೆ ಮಹಿಳೆಯರಿಗೆ ಮೀಸಲಾತಿ ಕೊಡಬೇಕು ಎಂದು ಆದೇಶವಾಗಿದೆ. ಆದರೆ 33% ಏನು ಮಹಿಳೆಯರಿಗೆ ಮೀಸಲಾತಿ ಇತ್ತು ಅಷ್ಟೇ ಪ್ರಮಾಣದ ಮೀಸಲಾತಿ ಉದಾಹರಣೆಗೆ ಗುಂಡ್ಲುಪೇಟೆಯ ಪುರಸಭೆಯಲ್ಲಿ 23ಕ್ಕೆ10 ಮಹಿಳೆಯರು ಇದ್ದರು. ಈಗಲೂ ಕೂಡ 50% ಆದರೂ 15 ಜನ ಮೀಸಲಾತಿಯಲ್ಲಿ ಮಹಿಳೆಯರಿಗೆ ಅವಕಾಶ ಆಗಿದೆ. ಶೇಕಡ 50ಕ್ಕೆ ಏರಿಸಿದ ಮೇಲೆ ಒಂದೆರಡಾದರೂ ಹೆಚ್ಚಾಗಬೇಕು. ಆರೀತಿ ಆಗಿಲ್ಲ. ಈ ರೀತಿ ಬೇಕಾದಷ್ಟು ನ್ಯೂನತೆಗಳು ಈ ಒಂದು ನೋಟಿಫಿಕೇಷನ್‌ನಲ್ಲಿ ಆಗಿವೆ. ಆದ್ದರಿಂದ ಈ ಮಾರ್ಗಸೂಚಿಯಲ್ಲಿಯೇ ಸಾಕಷ್ಟು ವ್ಯತ್ಯಾಸ ಇದೆ. ಇದರಲ್ಲಿ ಒಂದು sequence ಎಂದು ಹೇಳಿ ಕ್ಷೇತ್ರಗಳಲ್ಲಿ ಮೀಸಲಾತಿ ನಿಗದಿಪಡಿಸುವಾಗ sequence ಎಂದು ಆಧಾರ ಇಟ್ಟುಕೊಂಡು ಮಾಡುತ್ತೇವೆಂದು ಹೇಳಿದ್ದಾರೆ.ಇದರಲ್ಲಿಯೂ ಕೂಡ ಒಂದು ಗೊಂದಲ ಇದೆ. ಇದನ್ನು ಯಾವರೀತಿ ಮಾಡಿದ್ದಾರೆಂದರೆ ಜಿಲ್ಲಾಧಿಕಾರಿಗಳ ಆಫೀಸ್‌ನಲ್ಲಿ ಮಾಹಿತಿ ಇಲ್ಲ. ನಮ್ಮ ಪುರಸಭೆ ಎಲೆಕ್ಷನ್ ಬ್ರಾಂಚ್‌ಗಳಲ್ಲಿ ಮಾಹಿತಿ ಇಲ್ಲ. ಇದನ್ನು ಯಾವರೀತಿ ಮಾಡಿದ್ದಾರೆ ಎಂಬ ಬಗ್ಗೆ ಯಾರಿಗೂ ಸರಿಯಾದ ಮಾಹಿತಿ ಸಿಗುತ್ತಿಲ್ಲ. ಆದ್ದರಿಂದ ತರಾತುರಿಯಲ್ಲಿ ಮಾಡಿರುವಂಥ ಮೀಸಲಾತಿ ನಿಗದಿಪಡಿಸಿರುವುದರಿಂದ ಆರ್ಡರ್ಸ್ ಅನ್ನು ನೋಟಿಫಿಕೇಷನ್

withdraw ಮಾಡಿ, ಈಗಾಗಲೇ ನಮ್ಮ ಉಪ ನಾಯಕರು ಹೇಳಿದ ರೀತಿಯಲ್ಲಿ ಪುರಸಭೆಯ ವ್ಯಾಪ್ತಿಯ ವಿಸ್ತೀರ್ಣಗಳು ಹೆಚ್ಚಾಗುತ್ತಿವೆ. ಮತದಾರರ ಪಟ್ಟಿ ಪರಿಷ್ಕರಣೆಯಾಗಿ ಹೊಸ ಮತದಾರರ ಪಟ್ಟಿ ಬರುತ್ತಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಮೀಸಲಾತಿಯಲ್ಲಿಯೂ ಸಾಕಷ್ಟು ಏರುಪೇರುಗಳಾಗುವ ಸಾಧ್ಯತೆಗಳಿವೆ. ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಇದರ ಬಗ್ಗೆ ಸರಿಯಾದ ರೀತಿಯಲ್ಲಿ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟು ಇದನ್ನು ಸರಿಪಡಿಸಿಕೊಂಡು ಚುನಾವಣೆ ಮಾಡಿದರೆ ಮುಂದಿನ ಐದು ವರ್ಷದ ಆಡಳಿತ ಸುಗಮವಾಗಿ ನಡೆಯುತ್ತದೆ. ಇಲ್ಲದೇ ಹೋದರೆ ಆ ಒತ್ತಡಕ್ಕೆ ನೀವು ಚುನಾವಣೆ ಮಾಡಿದರೆ ಐದು ವರ್ಷಗಳ ಕಾಲ ಪುರಸಭೆಗಳಲ್ಲಿ ಗೊಂದಲವಾಗುತ್ತವೆ. ಅವು ಈಗಾಗಲೇ ಗೊಂದಲದ ಗೂಡಾಗಿದೆ. ಜೊತೆಗೆ ಇನ್ನೈದು ವರ್ಷಗಳು ಇದೇರೀತಿಯಲ್ಲಿ ಪುರಸಭೆ ಆಡಳಿತ ನಡೆಸಬೇಕಾಗುತ್ತದೆ.ಆದ್ದರಿಂದ ಅದಕ್ಕೆ ಅವಕಾಶ ಕೊಡದಂತೆ ಸರ್ಕಾರ ಇದನ್ನು ಬಹಳ ಗಂಭೀರವಾಗಿ ಪರಿಗಣಿಸಿ ಮಾರ್ಪಾಟು ಮಾಡಬೇಕು ಮತ್ತು ನೋಟಿಫಿಕೇಷನ್ ಅನ್ನು withdraw ಮಾಡಿಕೊಳ್ಳಬೇಕೆಂದು ಹೇಳಿ ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಡಾ : ಹೆಚ್. ಸಿ. ಮಹದೇವಪ್ಪ (ಟಿ.ನರಸೀಪುರ) : ಅಧ್ಯಕ್ಷರೆ, ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಪಟ್ಟ ಹಾಗೆ ಹೊರಡಿಸಿರುವ ಮೀಸಲಾತಿಯನ್ನು ಕುರಿತು ಮಾನ್ಯ ಸದಸ್ಯರಿಬ್ಬರೂ ಬೆಳಕನ್ನು ಚೆಲ್ಲಿದಾರೆ. ನಾನು ಪುನ: ಅದರ ವಿವರಣೆಗೆ ಹೋಗುವುದಿಲ್ಲ. ಸ್ಥಳೀಯ ಸಂಸ್ಥೆಗಳು ಸಂವಿಧಾನ ಬದ್ಧವಾದ ಸಂಸ್ಥೆಗಳು. ಅವಧಿ ಮುಗಿದ ತಕ್ಷಣವೇ ಚುನಾವಣೆ ನಡೆಸತಕ್ಕಂಥದ್ದು ಸರ್ಕಾರದ ಜವಾಬ್ದಾರಿ ಮತ್ತು ಹೊಣೆಗಾರಿಕೆಯಾಗಿದೆ. ಅದನ್ನು ಮಾಡತಕ್ಕಂಥ ಸಂದರ್ಭದಲ್ಲಿ ಪ್ರಾತಿನಿಧ್ಯವನ್ನು ಕೊಡಲಿಕ್ಕೆ ಮೀಸಲಾತಿ ಮೂಲಕ SC/ST,Backward Class Women ಇವರುಗಳಿಗೆ ಸಮರ್ಪಕವಾದಂಥ ಮೀಸಲಾತಿಯನ್ನು ಕೊಡತಕ್ಕಂಥದ್ದು ಕೂಡ ರಾಜ್ಯಾಂಗ ಬದ್ಧವಾದಂಥ ಹಕ್ಕು. ಮತದಾನ ಕೂಡ It is a fundamental right under the Constitution. Giving political reservation to SC/ST is a Constitutional provision and it is their right. Vote ಮಾಡುವುದು

ಕೂಡ ಹಕ್ಕು. ಈ ಎರಡು ಹಕ್ಕುಗಳೂ ಸರಿಯಾಗಿ ಚಲಾವಣೆ ಆಗದಿದ್ದರೆ it is agross violation of the Constitution. Under such circumstances, ಸರ್ಕಾರ ಈ ಎರಡು ಮಹತ್ತರವಾದಂಥ ರಾಜ್ಯಾಂಗ ಬದ್ಧವಾದ ಹಕ್ಕುಗಳನ್ನು ಗಮನದಲ್ಲಿಟ್ಟುಕೊಂಡು ಜನಗಣತಿ ಆಧಾರದ ಮೇಲೆ ಹೆಚ್ಚುತ್ತಿರುವ ಜನಸಂಖ್ಯೆಗೆ ಮತದಾನದಲ್ಲಿ ಭಾಗವಹಿಸುವಂಥ ಅವರ ಮೂಲಭೂತ ಹಕ್ಕುಗಳನ್ನು ಉಲ್ಲಂಘನೆ ಮಾಡದ ರೀತಿಯಲ್ಲಿ ರಾಜ್ಯಾಂಗ ಎಸ್.ಸಿ./ಎಸ್.ಟಿ. ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ಕೊಡಬೇಕೆನ್ನುವಂಥ ಉದ್ದೇಶವನ್ನು ಹಾಳು ಮಾಡದ ರೀತಿಯಲ್ಲಿ ಈ ಮೀಸಲಾತಿಯನ್ನು ನಿಗದಿ ಮಾಡುವಾಗ ಮತ್ತು ಸ್ವಲ್ಪ ಸಮಯವನ್ನು ತೆಗೆದುಕೊಂಡು ರಾಜ್ಯದ ಉಚ್ಚನ್ಯಾಯಾಲಯಕ್ಕೆ ಮನವಿಯನ್ನುಮಾಡಿ ಈ ಎರಡು ಮೂಲಭೂತ ಹಕ್ಕುಗಳ ಉಲ್ಲಂಘನೆ ಆಗದ ರೀತಿಯಲ್ಲಿ 2011ರ ಜನಗಣತಿಯನ್ನು ಆಧಾರವಾಗಿಟ್ಟುಕೊಂಡು ಆ ಜನರಿಗೆ ಮತದಾನದ ಹಕ್ಕುಗಳನ್ನು ಒದಗಿಸುವುದು ಒಂದು ಕಡೆಯಾದರೆ, ಜನಸಂಖ್ಯೆ ಹೆಚ್ಚಾಗಿರುವಂಥ ಎಸ್.ಸಿ./ಎಸ್.ಟಿ. ಜನಾಂಗಕ್ಕೆ ಹೆಚ್ಚು ಪ್ರಾತಿನಿಧ್ಯವನ್ನು ಕೊಡುವುದರ ಮೂಲಕ ರಾಜ್ಯಾಂಗದ ಉದ್ದೇಶವನ್ನು ರಕ್ಷಣೆ ಮಾಡುವಂಥ ರೀತಿಯಲ್ಲಿ ಕೆಲಸವನ್ನು ಮಾಡಬೇಕು ಎಂದು ಹೇಳಿ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ ಮತ್ತೆ ಕೆಲವು ಹಳ್ಳಿಗಳು, ಪಟ್ಟಣ,ಪುರಸಭೆಗಳನ್ನು ಸೇರಿಸಬೇಕು. ಅದಕ್ಕೆ ಜನಗಣತಿಯನ್ನು ಕಾಯುತ್ತಿದ್ದಾರೆ. ಕೆಲವು ಪಂಚಾಯಿತಿಗಳನ್ನು ಸೇರಿಸಿ amalgamation ಮಾಡುವುದು. ಉದಾಹರಣೆಗೆ ನರಸೀಪುರ ಮತ್ತು ಬೈರಾಪುರ ಎರಡನ್ನೂ ಸೇರಿಸಿ ಪಟ್ಟಣ ಪಂಚಾಯಿತಿಯನ್ನು ಕಳೆದ ಬಾರಿ ಪುರಸಭೆ ಮಾಡಬೇಕೆಂದು ಹೇಳಿದ್ದಾರೆ. ಬನ್ನೂರು ಪಕ್ಕ ಚಾಮನಹಳ್ಳಿ ಎಂಬ ಹಳ್ಳಿ ಇದೆ, ಅದು ಬನ್ನೂರಿನಲ್ಲಿ ಸೇರಿಕೊಂಡಿದೆ. ಈ ಕಡೆ ಗ್ರಾಮ ಪಂಚಾಯಿತಿ ಸವಲತ್ತು ಇಲ್ಲ, ಪಟ್ಟಣ ಪಂಚಾಯಿತಿ ಸವಲತ್ತು ಇಲ್ಲ. ಈ ತರಹದ ಗೊಂದಲಗಳಿರುವುದರಿಂದ 2011ರ ಜನಗಣತಿಯನ್ನು ಮಾನದಂಡವಾಗಿಟ್ಟುಕೊಂಡು ಚುನಾವಣೆಯನ್ನು ರಾಜ್ಯಾಂಗಬದ್ಧವಾಗಿ ನಡೆಸಬೇಕಾಗಿದ್ದರೂ ಕೂಡ ಯಾವುದೇ ಕಾರಣಕ್ಕೂ ಮೂಲಭೂತ ಹಾಗೂ ರಾಜ್ಯಾಂಗ ಬದ್ಧವಾದ ಹಕ್ಕುಗಳು ಉಲ್ಲಂಘನೆಯಾಗದ ರೀತಿಯಲ್ಲಿ ಸರ್ಕಾರ

ನ್ಯಾಯಾಲಯಕ್ಕೆ ಮನವಿ ಮಾಡಿ ಸಮಯವನ್ನು ತೆಗೆದುಕೊಂಡು ಈ ಹಕ್ಕುಗಳು ಉಲ್ಲಂಘನೆ ಆಗದ ರೀತಿಯಲ್ಲಿ ಈ ಚುನಾವಣೆಯಲ್ಲಿ ಮೀಸಲಾತಿಯನ್ನು ಮತ್ತು ಜನಗಣತಿಯನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ (ಅರಸೀಕೆರೆ) : ಮಾನ್ಯ ಅಧ್ಯಕ್ಷರೆ, ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಯನ್ನು ನಡೆಸಬೇಕೆಂಬ ನಿರ್ಧಾರವನ್ನು ಬಹುಶ: ಸರ್ಕಾರ ತೆಗೆದುಕೊಂಡಿಲ್ಲ. ಚುನಾವಣಾಧಿಕಾರಿಗಳ ಮತ್ತು ಮಾನ್ಯ ಉಚ್ಚನ್ಯಾಯಾಲಯದ ನಿರ್ದೇಶನವೆನ್ನುವುದನ್ನು ನಾವು ಪತ್ರಿಕೆಯಲ್ಲಿ ದಿನಾ ಓದುತ್ತಿದ್ದೇವೆ. ಪತ್ರಿಕೆಯಲ್ಲಿ ಅದೆಲ್ಲಾ ಗೊತ್ತಿಲ್ಲ, ಇಷ್ಟು ದಿನಗಳ ಒಳಗೆ ಮೀಸಲಾತಿ ಪಟ್ಟಿಯನ್ನು ತಂದು ಕೊಡಿ ಎಂದು ಕೇಳ್ಳಿದ್ದರು. Election Commissioner 15 ಕೋಟಿ ರೂ.ಗಳನ್ನು ಕಟ್ಟಿ ಚುನಾವಣೆಯನ್ನು ಮಾಡಬೇಕೆಂದು ಹೇಳಿದರು. ಈ ರೀತಿ ನಡಸಿಕೊಂಡು ಮಾಡುತ್ತಿದ್ದಾರೆ. ಆದರೆ ಎಲ್ಲಾಸದಸ್ಯರು ಮಾತನಾಡುವಂತಹ ಸಂದರ್ಭದಲ್ಲಿ ಇಲ್ಲಿ ವಾಸ್ತವಾಂಶವನ್ನು ಹೇಳಿದ್ದಾರೆ. ಒಬ್ಬರ ಕ್ಷೇತ್ರದಲ್ಲಿ ಏನಾಗಿರೆಯೋ ಅದು ಎಲ್ಲರ ಕ್ಷೇತ್ರದಲ್ಲೂ ಆಗಿದೆ. ಇವತ್ತು ಜನಪ್ರತಿನಿಧಿಗಳಾದ ನಾವು ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಿಕ್ಕಿ ಹಾಕಿಕೊಳ್ಳಬೇಕಾಗಿದೆ. ನಾವುಗಳು 4-5 ತಿಂಗಳಲ್ಲಿ ಮತ್ತೆ ಪರೀಕ್ಷೆಯನ್ನು ಬರೆಯುವುದಕ್ಕೆ ಹೋಗಬೇಕು. ಈ ಕಾಲದಲ್ಲಿ ಅವರು ಮಾಡಿರುವ ಮೀಸಲಾತಿ 100 ಕ್ಕೆ 100 ಭಾಗ ಎಸ್.ಸಿ.ಗಳಿರುವ ಜಾಗದಲ್ಲಿ BCMC ಇಟ್ಟಿದ್ದಾರೆ. BCMC ಎಂದರೆ ಎರಡೇ ವರ್ಗದ ಜನ ನಿಲ್ಲಬೇಕು. ಯಾವ ರೀತಿ confusion ಮಾಡಿದ್ದಾರೆಂದರೆ ಎಂ.ಎಲ್.ಎ.ಗಳು ಪುರಸಭಾ ವ್ಯಾಪ್ತಿಯಲ್ಲಿ ಚುನಾವಣೆಗೆ ಮತವನ್ನೇ ಕೇಳಬಾರದು ಆ ರೀತಿ ಮಾಡಿದ್ದಾರೆ. ಯಾರು ಮಾಡಿದ್ದಾರೆ ಏನು ಮಾಡಿದ್ದಾರೆಂದು ಗೊತ್ತಿಲ್ಲ. ಈ ಒಂದು ಪರಿಸ್ಥಿತಿಯಿದೆ.ಇಲ್ಲಿಂದ ನಾವು ಹೋದಾಗ ಈ ರೀತಿ ಮಾಡಿದ್ದೀರಲ್ಲ, ಇದನ್ನು ನೀವು ಮಾಡದೆ ಆಗುತ್ತದೆಯೇ ಎಂದು ಹೇಳಿ ಎಲ್ಲಾ ಬಂದು attack ಮಾಡಿದರು. ಕಾಕತಾಳೀಯವೆಂಬಂತೆ ನನ್ನ followers ಯಾರಿದ್ದಾರೋ 2-3 ಜನರಿಗೆ General ಮಾಡಿದ್ದಾರೆ. ಇವರಿಗೆ ಜನರಲ್ ಆಗಿದೆ ಬಾಕಿ ಜನರು ನಿಲ್ಲದ ಹಾಗೆ ಮಾಡಿದ್ದೀರೆಂದು ಹೇಳಿ ದೊಡ್ಡೂಬೆಯನ್ನು ಕೂರಿಸುವ ವ್ಯವಸ್ಥೆಯಾಗುತ್ತಿದೆ. ಮತ್ತೊಂದು ವೈಜ್ಞಾನಿಕವಾಗಿ ನಾವು

ಯೋಚನೆ ಮಾಡುವುದಾದರೆ ಈಗಾಗಲೇ 2002ರ ಜನಗಣತಿಯಿಂದ 2011ರವರೆಗೆ ಪರಿಪಕ್ವವಾಗಿ ಎಲ್ಲಾ ಜನಗಣತಿಗಳು ಆಗಿ ಕೆಲವೊಂದು ಮಾಹಿತಿಗಳು ಸಹ ಹೊರಬಿದ್ದಿವೆ. ಆದರೆ ಅಧಿಕೃತವಾಗಿ ಕೇಂದ್ರ ಸರ್ಕಾರದಿಂದ ಇನ್ನೂ ಹೊರಬಿದ್ದಿಲ್ಲ. 2013 ನೇ ಮಾರ್ಚ್ ಅಥವಾ ಏಪ್ರಿಲ್ ತಿಂಗಳೊಳಗೆ ಖಂಡಿತ ಹೊರಗೆಡವುತ್ತೇವೆಂಬ ಮಾಹಿತಿಯನ್ನು ಅವರು ಕೊಟ್ಟಿದ್ದಾರೆ. ಫೆಬ್ರವರಿ ಕೊನೆ ಅಥವಾ ಮಾರ್ಚ್ ಮೊದಲ ವಾರದಲ್ಲಿ ನಮ್ಮ ಚುನಾವಣೆಗಳು ದಿನಂಕಗಳು ಅಚಿತಿಮಗೊಳ್ಳುವ ಹಂತದಲ್ಲಿದೆ. ಇವತ್ತು ಆತುರಾತುರವಾಗಿ ಒಂದು ತಿಂಗಳೊಳಗೆ ಚುನಾವಣೆಗಳನ್ನು ನಡೆಸಲೇಬೇಕೆನ್ನುವುದು ಹಾಗೂ 2011 ನೇ ಜನಗಣತಿಯ ಆಧಾರದ ಮೇಲೆ ಚುನಾವಣೆಯನ್ನು ನಡೆಸಿದರೆ ಇವತ್ತು ಆರ್ಥಿಕ ಸಂಕಷ್ಟದಲ್ಲಿರುವ ಎಲ್ಲಾ ಪುರಸಭೆಗಳಿಗೆ ಹಣವನ್ನು ಯಾವ ರೀತಿ ಕೊಡುತ್ತೀರಿ? ಆನಗಣತಿಯನ್ನು ಆಧರಿಸಿ ಕೊಡುತ್ತೀರಿ. ಆನಸಂಖ್ಯೆ ಆಧಾರದ ಮೇಲೆ ನೀವು ಅಭಿವೃದ್ಧಿ ಅನುದಾನವನ್ನು ಕೊಡುವ ಸಂದರ್ಭದಲ್ಲಿ ನಮ್ಮ ಅರಸೀಕೆರೆಯಲ್ಲಿ 2002 ರ ಜನಗಣತಿಯಂತೆ 38,000 ಜನಸಂಖ್ಯೆಯಿದೆ. ಇವತ್ತು 2011 ರ ಅಂದರೆ ನಾವು ಇವತ್ತಿನ ಜನಗಣತಿ ಪ್ರಕಾರ ತೆಗೆದುಕೊಂಡರೆ 60,000ಕ್ಕೆ ಹೋಗುತ್ತೇವೆ. ಎಷ್ಟು ಅನುದಾನ lapse ಆಗುತ್ತದೆ? ಜೊತೆಗೆ ಮೀಸಲಾತಿ ಕೊಡುವುದು ಏಕೆ? ಎಲ್ಲಾ ಜನಾಂಗದವರಿಗೆ ಅದರಲ್ಲೂ ಎಸ್.ಸಿ/ಎಸ್.ಟಿ ಗಲಿಗೆ ಅನ್ಯಾಯವಾಗದ ರೀತಿಯಲ್ಲಿ ಎಲ್ಲಾ ಜನಾಂಗಗಳಿಗೆ ಈ ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ಒಳಪಡಬೇಕೆಂಬ ಭಾವನೆಯಿಂದ ಏನು ಮೀಸಲಾತಿಯನ್ನು ಕೊಟ್ಟಿದ್ದಾರೋ ಆ ಮೀಸಲಾತಿಯನ್ನು ಕೊಡುವುದರಲ್ಲಿ ನಾವೆಲ್ಲಾ ಇವತ್ತು ವಿಫಲರಾಗುತ್ತಿದ್ದೇವೆ. ಆ ಒಂದು ದೃಷ್ಟಿಯಿಂದ ಇನ್ನೂ 2–3 ಎಸ್.ಸಿ.ಸ್ಥಾನಗಳು ಹೆಚ್ಚಾಗುವ ಸಾಧ್ಯತೆಯಿದೆ. ಅದರ ಜೊತೆಗೆ 50,000 ಜನಸಂಖ್ಯೆಗಿಂತ ಮೇಲ್ಪಟ್ಟರೆ ನಗರಸಭೆ ಆಗಬೇಕೆಂಬ ಕಾನೂನಿನ ಆದೇಶ ಏನಿದೆ ಅದಕ್ಕೆ ಒಳಪಟ್ಟರೆ ನಗರ ಸಭೆಯಾಗುತ್ತದೆ. ಇಂತಹ ವ್ಯವಸ್ಥೆಯಲ್ಲಿ ಇದನ್ನು ದಯಮಾಡಿ, ಮಾನ್ಯ ಎಸ್.ಸುರೇಶ್ ಕುಮಾರ್ ರವರು ಬುದ್ಧಿವಂತ ಸಚಿವರು, ಇವರು ಏಕೆ ಈ ರೀತಿ ಮಾಡಿದ್ದಾರೆಂದು ಗೊತ್ತಿಲ್ಲ. ಒಟ್ಟಾರೆ ಇಲ್ಲಿ ಎಲ್ಲೋ ಒಂದು ಕಡೆ ತೊಡಕಾಗಿದೆ. ನೇರವಾಗಿ ಸರ್ಕಾರ notification

ಏನು ಮಾಡಿದ್ದಾರೋ ಅದನ್ನು ವಾಪಸ್ಸು ಪಡೆದು ನ್ಯಾಯಾಲಯಕ್ಕೆ ಸಮರ್ಥವಾದ ದಾಖಲಾತಿಯನ್ನು ಕೊಡಬೇಕು. ಅವರು ಇಲ್ಲಾ ನೀವು 2002 ರ ಜನಗಣತಿಯನ್ನು ಆಧಾರವಾಗಿಟ್ಟುಕೊಂಡು ಮಾಡಿ ಎಂದರೆ, ಮಾನ್ಯ ಸಚಿವರಿಗೆ ಎಲ್ಲಾ ಗೊತ್ತಿದೆ ಅವುರ ಉತ್ತರವನ್ನು ಹೇಳುತ್ತಾರೆ. 2002ರ ಜನಸಂಖ್ಯೆ ಮತ್ತು 2013 ರ ಜನಸಂಖ್ಯೆಗೂ ವ್ಯತ್ಯಾಸವಿಲ್ಲವೇ? ದಯವಿಟ್ಟು ಇದರ ಬಗ್ಗೆ ಸರ್ಕಾರ ಗಮನಹರಿಸಬೇಕು. ಇದು ಮಾನ್ಯ ಜಾರಕಿಹೊಳಿಯವರಿಗೆ ಬರುತ್ತದೆ, ದಯವಿಟ್ಟು ತಾವು ಎಲ್ಲಕ್ಕಿಂತ ಹೆಚ್ಚಾಗಿ Election Commissioner ಗೆ ಹಾಗೂ ನ್ಯಾಯಾಲಯಕ್ಕೂ ಕೂಡ ಮನವರಿಕೆ ಮಾಡಿಕೊಟ್ಟು ಯಾವುದೇ ಕಾರಣಕ್ಕೂ ಕೂಡ ಈಗಿರುವ ಸ್ಥಿತಿಯಲ್ಲಿ ಈ ಚುನಾವಣೆಯನ್ನು ನಡೆಸಕೂಡದು. ಎಲ್ಲವನ್ನೂ ಸರಿಪಡಿಸಿಕೊಂಡು ನೀವು ಯಾವಾಗಲಾದರೂ ನಡೆಸಿ. ಈ ಚುನಾವಣೆ–ಯನ್ನು ನಡೆಸುವುದು ಯಾವುದೇ ಕಾರಣದಿಂದಲೂ ಸೂಕ್ತವಲ್ಲ. ಒಂದು ಆದೇಶವನ್ನು ರದ್ದುಪಡಿಸಿ ಮುಂದೆ ಹೊಸ nolification ಅನ್ನು ಮಾಡಿಕೊಡಬೇಕೆಂದು ಹೇಳಿ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಸಚಿವರು ಉತ್ತರವನ್ನು ಹೇಳಿ. ಇದು ಶೂನ್ಯ ವೇಳೆ ಹೇಳಿದ್ದನ್ನೇ ಎಲ್ಲರೂ ಹೇಳುವುದು ಬೇಡ.

ಶ್ರೀ ಸೈಯದ್ ಯಾಸೀನ್ : ಉತ್ತರ ಬಂದಿದೆ ದಯವಿಟ್ಟು ಅದರ ಪ್ರತಿಯನ್ನು ಕೊಡಿ.

Mr. SPEAKER : No,when I have called, you were not there.

ಶ್ರೀ ಸೈಯದ್ ಯಾಸೀನ್ : ಇದು ಬಹಳ ಗಂಭೀರವಾದ ವಿಷಯ. Regarding that CMC, ಒಂದೆರಡು ನಿಮಿಷ ನಾನು ಕೂಡ ಮಾತನಾಡುತ್ತೇನೆ.

ಅಧ್ಯಕ್ಷರು : ಇಲ್ಲ. ಮಾನ್ಯ ಸಚಿವರು ಉತ್ತರ ನೀಡಲಿ.

ಶ್ರೀ ಬಾಲಚಂದ್ರ ಎಲ್. ಜಾರಕಿಹೊಳಿ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಅನೇಕ ಮಾನ್ಯ ಸದಸ್ಯರುಗಳು ಮೀಸಲಾತಿ ಪಟ್ಟಿ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡಿದ್ದಾರೆ. ಮೀಸಲಾತಿ ಪಟ್ಟಿ ಪಕಟಣೆಯಾಗುವುದಕ್ಕೆ

ಮುಖ್ಯ ಕಾರಣವೇನೆಂಬುದನ್ನು ಸದನದ ಗಮನಕ್ಕೆ ತರುತ್ತೇನೆ. ಸರ್ಕಾರ ಹಾಗೂ ಚುನಾವಣಾ ಆಯೋಗ ಚುನಾವಣೆಯನ್ನು ಡಿಲೇ ಮಾಡುತ್ತಿದ್ದಾರೆ. ಬೇಗನೆ ಚುನಾವಣೆ ಮಾಡುವಂತೆ ಸರ್ಕಾರಕ್ಕೆ ನಿರ್ದೇಶನ ಕೊಡಬೇಕೆಂದು ಹೇಳಿ ಮೈಸೂರಿನ ಒಬ್ಬ ಸದಸ್ಯರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಒಂದು ರಿಟ್ ಪೆಟಿಷನ್ ಹಾಕಿದ್ದರು. ಅವತ್ತು ನಮ್ಮ ಇಲಾಖೆಯ ಕಾರ್ಯದರ್ಶಿಗಳು ನ್ಯಾಯಾಲಯಕ್ಕೆ ಹೋಗಿ ನಾವು ಯಾವುದೇ ಕಾರಣಕ್ಕೂ ಚುನಾವಣೆಯನ್ನು ಡಿಲೇ ಮಾಡುತ್ತಿಲ್ಲ. ಚುನಾವಣೆಯನ್ನು ಸರಿಯಾದ ಸಮಯದಲ್ಲಿ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಮೀಸಲಾತಿ ಪಟ್ಟಿಯನ್ನು ನಾವು ನಾಲ್ಕು ಬಾರಿ ಪ್ರಕಟಣೆ ಮಾಡಿ ಒಂದು ವಾರ ಅದಕ್ಕೆ objection ಸಮಯವನ್ನು ಕೊಡುತ್ತೇವೆ. Objection ಬಂದ ನಂತರ ಡಿಸೆಂಬರ್ 17ರ ನಂತರ ಸರ್ಕಾರದಿಂದ ಚುನಾವಣಾ ಆಯೋಗಕ್ಕೆ ಕೊಡುತ್ತೇವೆ. ಮುಂದಿನ ಕೆಲಸವನ್ನು ಚುನಾವಣಾ ಆಯೋಗ ಮಾಡುತ್ತದೆ. ಈ ಸದನ ನಡೆದಾಗ ಎಲ್ಲಾ ಪಕ್ಷದ ಅನೇಕ ಚುನಾಯಿತ ಪ್ರತಿನಿಧಿಗಳು ಮೀಸಲಾತಿ ಪಟ್ಟಿ ಸರಿಯಿಲ್ಲ, ಸರಿ ಮಾಡಬೇಕೆಂದು ಹೇಳಿದಾಗ ಮಾನ್ಯ ಸದಸ್ಯರಲ್ಲಿ ನಾವು ಮಾಡಿಕೊಂಡೆವು. ಯಾವ್ಯಾವ ಮೀಸಲಾತಿ ಪಟ್ಟಿ ಆಗಿದೆಯೆಂದು ಹೇಳಿ ತಾವು ಜಿಲ್ಲಾಧಿಕಾರಿಗಳ ಮುಖಾಂತರ objection raise ಮಾಡಿ ಕೊಡಬೇಕು. ನಿನ್ನೆವರೆಗೆ ಸಮಯವಿತ್ತು. ಇವತ್ತು ಸಮಯ ಮುಗಿದಿದೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ : Objection file ಮಾಡುವುದಕ್ಕೆ extension of time ಕೊಡಿ.

ಶ್ರೀ ಬಾಲಚಂದ್ರ ಎಲ್. ಜಾರಕಿಹೊಳಿ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು) : ಜಿಲ್ಲಾಧಿಕಾರಿಗಳ ಮುಖಾಂತರ ಏನು ಮೀಸಲಾತಿಯನ್ನು ಕೊಟ್ಟಿದ್ದಾರೋ ಅದು ಬಂದ ನಂತರ ಈಗಾಗಲೇ ನಾನು ಹೇಳುತ್ತೇನೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಧ್ಯದಲ್ಲಿ ರಜೆ ಬಂದಿದೆ. ಇನ್ನೂ 10 ದಿವಸಗಳ ಕಾಲ extend ಮಾಡುವುದಕ್ಕೆ ಹೇಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಇನ್ನೂ ಒಂದು ವಾರ ಸಮಯ ಕೊಡಿ.

(ಗೊಂದಲ)

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ರಾಜ್ಯ ಮಟ್ಟದಲ್ಲಿ ಕಾರ್ಯದರ್ಶಿ, ಪಾಪ ಜಿಲ್ಲಾಧಿಕಾರಿಗಳು ಈ ತಕರಾರುಗಳನ್ನು ತೆಗೆದುಕೊಂಡು ಏನು ಮಾಡುತ್ತಾರೆ? ತಹಶೀಲ್ದಾರ್, ಎ.ಸಿ, ಜಿಲ್ಲಾಧಿಕಾರಿಗಳಿಗೆ ಇದರ ಬಗ್ಗೆ ಏನೂ ಗೊತ್ತಿಲ್ಲ. ಮಾಡಿರುವುದು ಇವರು.

(ಗೊಂದಲ)

ಶ್ರೀ ಬಾಲಚಂದ್ರ ಎಲ್.ಜಾರಕಿಹೊಳಿ : ತಕರಾರು ಕೊಡುವುದಕ್ಕೆ ಬೆಂಗಳೂರಿಗೆ ಬರುವುದು ಬೇಡ, ಜಿಲ್ಲಾಧಿಕಾರಿಗಳಿಗೆ ಕೊಡಿಯೆಂದು ಹೇಳಿದ್ದೇವೆ.

ಅಧ್ಯಕ್ಷರು : ಮೊದಲು ಮಾನ್ಯ ಸಚಿವರು ಉತ್ತರ ಹೇಳಲಿ ನಂತರ ಕೇಳಿ.

ಶ್ರೀ ಬಾಲಚಂದ್ರ ಎಲ್. ಜಾರಕಿಹೊಳಿ : ತಕರಾರು ಬಂದ ನಂತರ ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಅನೇಕ ಚುನಾಯಿತ ಪ್ರತಿನಿಧಿಗಳು ರಾಜ್ಯದ ಎಲ್ಲಾ ಜನರಿಂದ ಮೀಸಲಾತಿ ಪಟ್ಟಿ ಬಗ್ಗೆ ತಕರಾರು ಬಂದಿದೆ. ಒಂದು ಬಾರಿ objection ಎಲ್ಲಾ file ಆಗಿ ಬಂದ ನಂತರ ಸರ್ಕಾರದ ಹಂತದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆ ಕುಳಿತು ಚರ್ಚೆ ಮಾಡುತ್ತೇವೆ. ಮಹಿಳಾ ಮೀಸಲಾತಿ 50% ಬಂದಿರುವುದಕ್ಕೆ ಕೆಲವೊಂದು ಕಡೆ objection raise ಆಗಿದೆ. ಮಹಿಳಾ ಮೀಸಲಾತಿ 50% ಮೇಲೆ ಇರಬಾರದು ಎಂದಿದೆ. ಕೆಲವು ಕಡೆ 1 ಬರುವ ಬದಲು 10 ಬಂದಿದೆ. ಅಲ್ಲಿ ಕೆಲವೊಂದು ಕಡೆ ತೊಂದರೆಗಳಾಗಿದೆ. ತಕರಾರು ಕೊಟ್ಟ ನಂತರ ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆಮಾಡಿ ಮುಂದೆ ಏನು ಮಾಡಬೇಕೆಂಬ ಬಗ್ಗೆ ಖಂಡಿತ ಒಂದು ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ. 2011ರ ಜನಗಣತಿ ಪ್ರಕಾರ ಚುನಾವಣೆಗೆ ಹೋಗಬೇಕೆಂಬುದು ನಮ್ಮ ಸರ್ಕಾರದ ಇಚ್ಛೆ. ಇಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಅನೇಕ ಹಿಂದುಳಿದ ವರ್ಗಕ್ಕೆ ಅನ್ಯಾಯವಾಗುತ್ತದೆ. ಈಗಾಗಲೇ ನಾವು ಸೆನ್ಸಸ್‌ನವರಿಗೆ ಪತ್ರ ಬರೆದಾಗ ಅವರು 2013ನೇ ಜೂನ್ ವರೆಗೆ ಅನುಮತಿಯನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು. ನಾವು ಮತ್ತೆ 3–4 ಪತ್ರಗಳನ್ನು

ಬರೆದು ಒತ್ತಾಯ ಮಾಡಿದ ನಂತರ ಮಾರ್ಚ್ ಕೊನೆಯಲ್ಲಿ ಕೊಡುತ್ತೇವೆಂದು ನಮಗೆ ಪತ್ರ ಬರೆದರು. ಇಲ್ಲಿ ಬಹಳ ಜನ ಸಮುದಾಯಕ್ಕೆ ಅನ್ಯಾಯವಾಗುತ್ತಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದ್ದು, ನಾವು ಬಹಳಷ್ಟು ಪ್ರಯತ್ನ ಮಾಡಿದ್ದೇವೆ. ಈ ವಿಚಾರ ನ್ಯಾಯಾಲಯಕ್ಕೆ ಹೋಗಿದ್ದು, ಈಗಾಗಲೇ ನ್ಯಾಯಾಲಯ ಮಾಡಲೇಬೇಕೆಂದು direction ಕೊಟ್ಟಾಗ ಕಾನೂನು ತೊಡಕು ಬರುವುದರಿಂದ ಇದರ ಸಾಧಕ-ಬಾಧಕಗಳನ್ನು ಚರ್ಚೆಮಾಡಿ ಮೀಸಲಾತಿ ಬಗ್ಗೆ ತಕರಾರು ಬಂದ ನಂತರ ಮಾನ್ಯ ಮುಖ್ಯಮಂತ್ರಿಗಳ ಮತ್ತು ನಾವು ಚರ್ಚೆ ಮಾಡಿ ಈ ಸಂಬಂಧ ಒಂದು ಯೋಗ್ಯವಾದ ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) : ಮಾನ್ಯ ಅಧ್ಯಕ್ಷರೆ, ಸದನದ ಸದಸ್ಯರ ಒಟ್ಟಾರೆ ಭಾವನೆ ಅರ್ಥವಾಗಿದೆ. ಮಾನ್ಯ ಸಚಿವರಾದ ಶ್ರೀ ಜಾರಕಿಹೊಳಿ ಅವರು ನಮ್ಮ ಮುಂದಿರುವ ಸಮಸ್ಯೆ ಹಾಗೂ ನಾವು ಮಾಡಿರುವ ಪ್ರಯತ್ನಗಳನ್ನು ಬಹಳ ಸೂಚ್ಯವಾಗಿ ಹೇಳಿದ್ದಾರೆ. ಶ್ರೀ ಮಹದೇವಪ್ಪನವರು population ಆಧಾರದ ಮೇಲೆ ಎಂದು ಹೇಳಿದ್ದಾರೆ. 74th amendment ಬಂದ ಮೇಲೆ ಅದರಲ್ಲಿ ಬಹಳ ನೇರವಾಗಿ ಒಂದು ಮಾತನ್ನು ಹೇಳಿದ್ದಾರೆ. Before the expiry of this elected body, election ಆಗಬೇಕು. ಅದರಲ್ಲಿ ತಪ್ಪಿಸಿಕೊಳ್ಳುವುದಕ್ಕೆ ಅವಕಾಶವೇ ಇಲ್ಲ. ಈ ವಿಚಾರದಲ್ಲಿ ನಾವು population ಎನ್ನುವ ಬಗ್ಗೆಯೂ ಕೂಡ ಚರ್ಚೆ ಮಾಡಿದ್ದೇವೆ. 2011 ನೇ census ಆಧಾರದ ಮೇಲೆ ಚುನಾವಣೆಯಾಗಬೇಕೆಂದು ಎಲ್ಲರೂ ಹೇಳುತ್ತಿದ್ದಾರೆ. ಇದು 100 ಕ್ಕೆ 100 ಸತ್ಯ. ಒಂದು ವೇಳೆ ಈಗ ಆಗದಿದ್ದರೆ 5 ವರ್ಷಗಳ ಕಾಲ ಎಲ್ಲರೂ ವಂಚಿತರಾಗುತ್ತಾರೆ. ನನ್ನ ಹತ್ತಿರ ಇರುವ ಮಾಹಿತಿ ಪ್ರಕಾರ ತುಮಕೂರು, ಬಿಜಾಪುರ ಮತ್ತು ಶಿವಮೊಗ್ಗಗಳು ಕಾರ್ಪೊರೇಷನ್ ಆಗುವ ಅರ್ಹತೆ ಪಡೆದಿವೆ. ಅದನ್ನು ಯಾವಾಗ ಮಾಡುತ್ತೇವೆಂದರೆ ಅಂತಿಮ, ಆಖೈರು, ಅಧಿಕೃತ ಅಂಕಿ

ಅಂಶಗಳು ಬಂದ ಮೇಲೆ ಮಾಡುತ್ತೇವೆ. ಅಲ್ಲಿಯವರೆಗೂ ಮಾಡುವುದಕ್ಕಾಗುವುದಿಲ್ಲ. ಅದೇ ರೀತಿ ಸುಮಾರು ೪೨ ಟಿ.ಎಂ.ಸಿ.ಗಳು ಸಿ.ಎಂ.ಸಿ. ಗಳಾಗುವುದಕ್ಕೆ ಇವತ್ತು ಅರ್ಹತೆ ಪಡೆಯುತ್ತಿವೆ. ಒಂದು ಸಾರಿ ಸಿ.ಎಂ.ಸಿ.ಆದರೆ, ನಗರಪಾಲಿಕೆ ಆದರೆ ಸಾಕಷ್ಟು ಅನುದಾನಗಳು ನಮಗೆ ಸಿಗುತ್ತವೆ, ಸಾಕಷ್ಟು development project ಸಿಗುತ್ತವೆ and ಸ್ಥಾನಗಳೂ ಕೂಡ ಜಾಸ್ತಿಯಾಗುತ್ತವೆ. ಈ ಎಲ್ಲಾ ವಿಷಯಗಳನ್ನು ಗೌರವಾನ್ವಿತ ಉಚ್ಚ ನ್ಯಾಯಾಲಯದ ಮುಂದೆ ಇಟ್ಟಿದ್ದೇವೆ. ನಾವು ಚುನಾವಣೆ ಮೀಸಲಾತಿ ವೈಜ್ಞಾನಿಕ ಆಧಾರದ ಮೇಲೆ ಮಾಡಬೇಕೆಂದು ತೀರ್ಮಾನ ಮಾಡಿ ಕೆಲಸ ಮಾಡುತ್ತಿದ್ದೇವೆ. ಆದರೆ ಇಲ್ಲಿ ಏನಾಗಿದೆಯೆಂದರೆ ಕೋರ್ಟ್‌ಗೆ ಹೋಗಿರುವುದು ನಾವಲ್ಲ, ಕೋರ್ಟ್‌ಗೆ ಹೋಗಿ ಭರವಸೆ ಕೊಟ್ಟಿರುವುದು ನಾವಲ್ಲ, ಕೋರ್ಟ್‌ಗೆ ರಾಜ್ಯ ಚುನಾವಣಾ ಆಯೋಗ ಹೋಗಿ direction ತಂದಿದೆ. The State Election Commission has approached the Hon'ble High Court. ಇಂತಹ ದಿವಸದಲ್ಲಿ election ಆಗಬೇಕು. ಹೈಕೋರ್ಟ್ ಏನು ಮಾಡಿದೆಯೆಂದರೆ ಚುನಾವಣೆಗೆ ನಮಗೆಬಂದು ದಿನಾಂಕವನ್ನು ನೀಡಿದೆ. ನಾಳೆ ಒಳಗಡೆ objection ಬರೆಯಬೇಕು. ದಿನಾಂಕ 18.12.2012ರಂದು Final Notification ಆಗಬೇಕೆಂದು ಹೈಕೋರ್ಟ್ ಆದೇಶ ನೀಡಿದೆ. ನಾವು ಎಲ್ಲಾ ವಿಚಾರವನ್ನು ಅಂದರೆ 2011 ರ ವಿಚಾರ, ಇವತ್ತಿನ ಪರಿಸ್ಥಿತಿ, ಮಾರ್ಚಿನಲ್ಲಿ ಬರುತ್ತದೆ, ಇದಕ್ಕೆ ಸಂಬಂಧಿಸಿದಂತೆ ಎಲ್ಲವನ್ನೂ ತಯಾರಿ ನಡೆಸುತ್ತಿದ್ದೇವೆಂದು ಹೈಕೋರ್ಟ್ ಮುಂದೆ ಪ್ರಸ್ತಾಪ ಮಾಡಿದ್ದೇವೆ. ಹೈಕೋರ್ಟ್ ಆದೇಶದ ಮೇಲೆ ಮಾನ್ಯ ಸಚಿವರು ಹೇಳಿದಂತೆ ಇಂದು ನಮಗೆ ಕಾನೂನು ತೊಡಕು ಉಂಟಾಗಿದೆ. ಹೈಕೋರ್ಟ್ ಏನು ನಿರ್ದೇಶನ ನೀಡಿದೆ ಅದರ ಪ್ರಕಾರ ಮಾಡುತ್ತಿದ್ದೇವೆ. ಯಾವುದೇ ರೀತಿಯ ವೈಪರೀತ್ಯಗಳನ್ನು ಮಾಡುವುದಕ್ಕೆ ನಾವು ಹೋಗಿಲ್ಲ. ನಮಗಿರುವ ಮೀಸಲಾತಿ ಗೈಡ್‌ಲೈನ್ಸ್ ಏನಿದೆ , ಮಾನದಂಡಗಳೇನಿದೆ ಅದರ ಪ್ರಕಾರ ಮಾಡಿದ್ದೇವೆ. ನಾಳೆಯವರೆಗೂ ಕಾಲಾವಕಾಶವಿದೆ, ಅಲ್ಲಿಯವರೆಗೂ ಏನೇನು objections ಬರುತ್ತದೆ ಎನ್ನುವುದನ್ನು ನೋಡಿಕೊಂಡು ಸೂಕ್ತವಾದ ಬದಲಾವಣೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ಬಿ. ಜಯಚಂದ್ರ (ಶಿರಾ) : ಈ ರೀತಿ ಇದ್ದಾಗ ಆಂಧ್ರ ಪ್ರದೇಶದಲ್ಲಿ ಇದನ್ನು ಸರಿಪಡಿಸಬೇಕಾದ ಕೆಲಸ ಮಾಡಲಿಕ್ಕೆ 6 ತಿಂಗಳ ಕಾಲ ಮುಂದಕ್ಕೆ ಹಾಕಿ ಮಾಡಿದ್ದಾರೆ. ಅಲ್ಲಿ ಮಾಡಿದ್ದಾರೆಂದ ಮೇಲೆ, ಇಲ್ಲಿ ಒಂದರಿಂದ ಒಂದೂವರೆ ವರ್ಷವಾದರೂ ಮಾಡಿಲ್ಲವೆನ್ನುವುದು ಬೇರೆ ಪ್ರಶ್ನೆ. ಆಂಧ್ರ ಪ್ರದೇಶದಲ್ಲಿ ಮಾಡುವುದಕ್ಕೆ ಸಾಧ್ಯವಿದೆ ಎಂದ ಮೇಲೆ ಕರ್ನಾಟಕದಲ್ಲಿ ಮಾಡಿದರೆ ತಪ್ಪು ಯಾರದ್ದು ಆಗುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ : ಆಂಧ್ರ ಪ್ರದೇಶದ್ದು ಯಾವ ರೀತಿ ಆಗಿದೆ ಎನ್ನುವುದನ್ನು ಕೂಡ ಪರಿಶೀಲನೆ ಮಾಡಿದ್ದೇವೆ. ಆಂಧ್ರ ಪ್ರದೇಶದಲ್ಲಿ ಯಾವ ರೀತಿ ಮಾಡಿದ್ದಾರೆನ್ನುವುದನ್ನು ನಾನು ನಿಮಗೆ ಹೇಳುತ್ತೇನೆ. ಶ್ರೀ ಜಯಚಂದ್ರ ಅವರು ಬಹಳ ಒಳ್ಳೆಯ ವಕೀಲರಿದ್ದಾರೆ. ದಯವಿಟ್ಟು ಬನ್ನಿ, ನಾನು ಹಾಗೂ ನೀವು ಹೈಕೋರ್ಟ್ ಮುಂದೆ ಈ ವಿಚಾರವನ್ನು ಇಡೋಣ. ಆಂಧ್ರ ಪ್ರದೇಶದಲ್ಲಿ ಸರ್ಕಾರ ಮಾಡಿರುವುದಲ್ಲ. ಹೈಕೋರ್ಟ್‌ನಲ್ಲಿ ಬೇರೆಯವರು ಹೋಗಿ ಸ್ಟೇ ತೆಗೆದುಕೊಂಡು ಬಂದು ಮಾಡುತ್ತಿರುವುದು. ಆದ ಕಾರಣ ಕಳೆದ ಒಂದೂವರೆ ವರ್ಷದಿಂದ ೨೦೧೧ ರ census ಆಧಾರವಾಗಿಟ್ಟುಕೊಂಡು ಮಾಡುತ್ತಿರುವುದು. ನಾವು ಕೂಡ ಹೈಕೋರ್ಟ್‌ಗೆ ಎಲ್ಲಾ ವಿಚಾರವನ್ನು ಹೇಳಿದ್ದೇವೆ. ಆಂಧ್ರ ಪ್ರದೇಶದ ಉದಾಹರಣೆಯನ್ನು ಸಹ ಹೇಳಿದ್ದೇವೆ. ಆದರೆ ಹೈಕೋರ್ಟ್ ಈ ಒಂದು direction ಕೊಟ್ಟು date fix ಮಾಡಿ ಮಾಡುತ್ತಿದೆ. ಇದಕ್ಕೆ ಮಾರ್ಗ-ವೇನು ಎಂಬುದು ಕುಳಿತುಕೊಂಡು ಯೋಚನೆ ಮಾಡೋಣ.

ಶ್ರೀ ಟಿ.ಬಿ. ಜಯಚಂದ್ರ : ಅಂತಹ ಪ್ರಶ್ನೆ ಬಂದರೆ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗುವುದಕ್ಕೆ ತಯಾರಾಗಬೇಕು ಮಾನ್ಯ ಅಧ್ಯಕ್ಷರೆ.

ಶ್ರೀ ಎಸ್. ಸುರೇಶ್ ಕುಮಾರ್ : Final ಆಗಿ ಹೈಕೋರ್ಟ್ ಆರ್ಡರ್ ಬಂದ ಮೇಲೆ Supreme Court ಗೆ ಹೋಗೋಣ.

ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಯಾವುದೇ ಕಾರಣಕ್ಕೂ election ಮುಂದೂಡುವಂತಹ ತೀರ್ಮಾನ ಮಾಡಬಾರದು. Election

ಸಮಯದಲ್ಲೇ ಆಗಬೇಕು. ಇದನ್ನೆಲ್ಲಾ ಮಾಡಿ election ಮುಂದೂಡುವಂಥದ್ದನ್ನು ಮಾಡಬಾರದು.

(ಗೊಂದಲ)

ಅಧ್ಯಕ್ಷರು : ರೇವಣ್ಣನವರು, ಕುಡಿಯುವ ನೀರಿನ ಬಗ್ಗೆ ಹೇಳುವುದು.

ಡಾ. ಎಂ.ಸಿ. ಸುಧಾಕರ್ : Technical problem ಹೇಳುತ್ತೇನೆ. ನಮ್ಮ ಸ್ನೇಹಿತರು ಸುಮ್ಮನೇ ವಿಕೇಂದ್ರೀಕರಣ ಎಂದು ಏನೋ ಮಾತನಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ರೇವಣ್ಣನವರನ್ನು ಕರೆದಿದ್ದೇನೆ. ಮತ್ತೆ ಮತ್ತೆ ಚರ್ಚೆಗೆ ಅವಕಾಶವಿಲ್ಲ.

(ಗೊಂದಲ)

ಅಧ್ಯಕ್ಷರು : Please ಕುಳಿತುಕೊಳ್ಳಿ.

7. ವಿಷಯ : ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಇವತ್ತು ರಾಜ್ಯ ಸರ್ಕಾರವೇ ಸುಮಾರು ೧೪೮ ತಾಲ್ಲೂಕುಗಳನ್ನು ಬರಗಾಲ ಎಂದು ಘೋಷಣೆ ಮಾಡಿದೆ. ೧೪೮ ತಾಲ್ಲೂಕುಗಳನ್ನು ಬರಗಾಲವೆಂದು ಘೋಷಣೆ ಮಾಡಿ, ಕೆಲವು ಕಡೆಗಳಲ್ಲಿ ಕುಡಿಯುವ ನೀರಿಗೆ, ದನಕರುಗಳ ಮೇವಿಗೆ ನೀರಿಲ್ಲ, ಇಂದು ೪೦೦-೫೦೦ ಅಡಿ ಕೊರೆದರೂ ನೀರು ಬರುತ್ತಿಲ್ಲ. ದಯಮಾಡಿ ಅವರಿಗೆ ಹೇಳಿ ಮಾನ್ಯ ಅಧ್ಯಕ್ಷರೆ,

ಶ್ರೀ ಹೆಚ್.ಸಿ. ಬಾಲಕೃಷ್ಣ : ಕುಡಿಯುವ ನೀರಿನ ಸಮಸ್ಯೆ ಬಹಳ ಪ್ರಮುಖವಾದಂತಹ ವಿಚಾರ. ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ ಎಂದರೆ ಹೇಗೆ? ಅರ್ಧ ಗಂಟೆ ಚರ್ಚೆಗೆ ಕಾಲಾವಕಾಶ ಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು : ಸದರಿ ವಿಚಾರಕ್ಕೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಲಾಗಿದೆ.